ಮುಖದ ದರ್ಶನವನ್ನು ತಾನು ಖಳನಿಗೆ ಮಾಡಿಸುವುದಾಗಿ ಸಿನಿಮಾದ ನಾಯಕನೇ ಒಪ್ಪಿಕೊಂಡಾಗ ರಾಧಾಳಿಗೆ ಅಸಾಧ್ಯ ಕೋಪ ಬಂತು. ಮುಂದೆ ಪರದೆಯ ಮೇಲೆ ಇವರ ಆಚಾರ ವಿಚಾರಗಳ ವಿವರಗಳು ಸಚಿತ್ರವಾಗಿ ಮೂಡಿದವು. ತಲಾತಲಾಂತರದಿಂದ ಪರಮಗೌಪ್ಯವಾಗಿ ಕಾಪಾಡಿಕೊಂಡು ಬಂದಿದ್ದ ವಿಷಯಗಳು ಹೀಗೆ ಜಗಜ್ಜಾಹೀರು ಆಗಿದ್ದು ಅವಳಿಗೆ ಹಿಡಿಸಲಿಲ್ಲ. ಇಷ್ಟೇ ಅಲ್ಲದೆ ತಮ್ಮಲ್ಲಿ ಇರದ ಕೆಲವು ಆಚಾರಗಳನ್ನು ಸಿನಿಮಾಗಾಗಿಯೇ ಸೇರಿಸಲಾಗಿತ್ತು. ಮುಂದೆ ಮಂಗಳಮುಖಿಯ ಹೆಣ ಸಿಗದಿದ್ದಕ್ಕೆ ಯಾರನ್ನಾದರೂ ಕೊಲೆ ಮಾಡಿಬಿಡುವ ಯೋಜನೆಯನ್ನು ಹಾಕಿಕೊಳ್ಳುವ ನಾಯಕನನ್ನು ಕಂಡಾಗ ಇದ್ದ ಬದ್ದ ಬೈಗುಳಗಳನ್ನು ಗೊಣಗಿ ಖಾಲಿ ಮಾಡಿದ ರಾಧಾಳಿಗೆ ಭಯವಾಗಲತ್ತಿತು. ಅಕ್ಕಪಕ್ಕದಲ್ಲಿರುವವರು ತನ್ನನ್ನೇ ನೋಡುತ್ತಿದ್ದಾರೆ ಎಂದು ಇಬ್ಬರಿಗೂ ಅನ್ನಿಸಿತು. ನಾಯಕನ ಯೋಜನೆಗೆ ಮಂಗಳಮುಖಿಯೊಬ್ಬಳು ತಿರುಗಿ ಬೀಳುತ್ತಾಳೆ. ಇಂಟರ್‌ವೆಲ್ಲಿಗೆ ಸಿಟ್ಟು ಭಯಗಳು ನೆತ್ತಿಗೇರಿ ಹೊರಗೆ ಹೋಗದೆ ಕೂತರು. ಮುಂದೆ ಏನೇನೋ ಆಗಿ ನಾಯಕನ ಬದುಕು ಮತ್ತು ಮಂಗಳಮುಖಿಯರ ಬಗೆಗಿನ ಭಾವ ಬದಲಾದಾಗ ಸಿನಿಮಾವನ್ನು ಸ್ವಲ್ಪ ಸಹಿಸಲು ಸಾಧ್ಯವಾಯಿತು. ಆದರೆ ಸಿನಿಮಾ ಮುಗಿದಾಗ ಒಂದಿಬ್ಬರು ತಮ್ಮನ್ನೇ ನೋಡುವುದು ಕಂಡು ಆ ಕ್ಷಣಕ್ಕೆ ಗೆಳತಿಯರಿಬ್ಬರಿಗೆ ಇದ್ದ ಹೆದರಿಕೆ ಜಾಸ್ತಿಯಾದಂತಾಯಿತು. ಸುತ್ತಲೂ ನೋಡಿ ಬಾಲ್ಕನಿಯ ಮೆಟ್ಟಿಲುಗಳನ್ನು ಅವಸರದಲ್ಲಿ ಇಳಿದು ಬಡ ಬಡ ನಡೆದು ನಿರ್ಜನ ರಸ್ತೆಗಳಲ್ಲಿ ನುಗ್ಗಿ ಮನೆ ಸೇರಿಕೊಂಡು ನಿರಾಳರಾದರು.

ರಾತ್ರಿ ಮಲಗುವ ಮುಂಚೆ ನೋಡಿದ ಸಿನಿಮಾದ ಕತೆಯನ್ನು ಉಳಿದವರಿಗೆ ಹೇಳಲು ಮನಸ್ಸಾಗಲಿಲ್ಲ. ಮನ ತುಂಬಿದ ದುಗುಡ ಇಬ್ಬರ ಕಣ್ಣುಗಳಲ್ಲಿ ಕಣ್ಣೀರಾಗಿ ನಿಂತಿತ್ತು.

**9**

ಬೆಳಿಗ್ಗೆ ಹೆಚ್ಚು ಮಾತಾಡದೆ ಸಿಂಗಾರಗೊಂಡು ಅಳುಕಿನಲ್ಲೇ ಇಬ್ಬರು ಸಿಗ್ನಲ್ಲು ತಲುಪಿದಾಗ ತುಂಬಿ ಹರಿಯುತ್ತಿರುವ ರಸ್ತೆಗಳನ್ನು ಕಂಡರು. ಇಂಚಿಂಚೂ ಗೊತ್ತಿದ್ದ ಜಾಗ ಸಂಪೂರ್ಣ ಅಪರಿಚಿತವೆನಿಸಲತ್ತಿತು. ಪಕ್ಕದಲ್ಲಿದ್ದ ಸುಕನ್ಯಾ ತನ್ನ ಜಾಗದೆಡೆಗೆ ಹೆಜ್ಜೆ ಹಾಕಿದಾಗ ರಾಧಾಳ ಭಯ ದುಪ್ಪಟ್ಟಾಯಿತು. ಮೆಲ್ಲಗೆ ಶುರುವಾದ ವಾಹನಗಳ ಹಾರನ್ನುಗಳು ಜೀವಕ್ಕೆ ನಾಟಲತ್ತಿದವು. ಸಿಗ್ನಲ್ ಬಿತ್ತು. ಫುಟ್ಪಾತಿನಿಂದ ಇಳಿಯಲು ರಾಧಾಳ ಕಾಲುಗಳಾಗಲಿ ಚಪ್ಪಾಳೆ ತಟ್ಟಲು ಕೈಗಳಾಗಲಿ ಒಪ್ಪಲಿಲ್ಲ. ಬಹಳ ಹೊತ್ತಿನವರೆಗೆ ಅವಳಿಗೆ ಬೈಕಿನವರದ್ದಾಗಲಿ ಕಾರಿನವರದ್ದಾಗಲಿ ಮುಖ ನೋಡಲಾಗಲಿಲ್ಲ. 'ಎಲ್ಲರೂ ಮೊನ್ನೆಯ ಆ ಸಿನಿಮಾ ನೋಡಿ ಬಂದಿದ್ದಾರೆ, ತನ್ನನ್ನು ಯಾರೋ ಗಮನಿಸುತ್ತಿದ್ದಾರೆ' ಎಂಬ ಅನುಮಾನ ಶುರುವಾಯಿತವಳಿಗೆ. ಸುಕನ್ಯಾಳ ಕಡೆ ನೋಡಿದಾಗ ಅವಳಾಗಲೇ ಬೇಡುತ್ತಿದ್ದಳು. ಅವಳ ಓಡಾಟದಲ್ಲಿ ಯಾವುದೇ ದುಗುಡ ಕಾಣಿಸಲಿಲ್ಲವಾದ್ದರಿಂದ ಸ್ವಲ್ಪ ಧೈರ್ಯ ತಂದುಕೊಂಡ ರಾಧಾ ಚಪ್ಪಾಳೆ ತಟ್ಟುತ್ತಾ ಕೆಲಸಕ್ಕಿಳಿದಳು.

ಸಿಗ್ನಲ್ಲು ಬಿಟ್ಟಾಗ ಗದ್ದಲ ಹೆಚ್ಚಿ ತಲೆ ತಿರುಗಿದಂತಾಯಿತು. ನಿಲ್ಲಲಾಗದೇ ರಾಧಾ ದೂರದಲ್ಲಿದ್ದ ಮುರಿದ ಕಾಂಪೌಂಡಿನ ಕಡೆಗೆ ಹೆಜ್ಜೆ ಹಾಕಿ ಒಳಗಿದ್ದ ಚಿಕ್ಕ ಮರದ ನೆರಳಲ್ಲಿ ಕೂತು ಸುಧಾರಿಸಿಕೊಂಡಳು. ಉಸಿರಾಟ ಹದಕ್ಕೆ ಬರಲೇ ಇಲ್ಲ. ಬಾಲ್ಯ, ಮನಸು, ದೇಹ, ಸಿನಿಮಾ ಎಲ್ಲವೂ ತಲೆಯ ಬೀಸೋಕಲ್ಲಿನಲ್ಲಿ ಪುಡಿಪುಡಿಯಾದವು. ಒಂದು ಸಿನಿಮಾ ಅವಶ್ಯಕತೆಗೂ ಮೀರಿ ಅವಳನ್ನು ಚಿಂತೆಗತ್ತಿಸಿದ್ದು ಇದೇ ಮೊದಲು. 'ಸತ್ತ ಮಂಗಳಮುಖಿಯ ಮುಖ ನೋಡಿದರೆ